ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ
ಶ್ರೀರಾಮಪುರ ಕ್ರಾಸ್, ಜಕ್ಕೂರು, ಬೆಂಗಳೂರು – 560 064
Mahatma Gandhi Institute of Rural Energy & Development
Srirampura Cross, Jakkur, Bengaluru – 560 064
Phone/Fax : 080 – 23626359 / 23626493
e-mail : mgiredblr@hotmail.com, mgiredblr@gmail.com web : mgired.kar.nic.in

ಸಂ.ಎಂಜಿಐ/ಎಪಿ/07/2018–19 ದಿನಾಂಕ : 21.06.2018

ಇವರಿಗೆ,
ಆಯ್ಕೆಯಾದ ಸರ್ಕಾರೇತರ ಸಂಘ ಸಂಸ್ಥೆಗಳು.

ವಿಷಯ: ಸರ್ಕಾರೇತರ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯಾಗಾರ ಏರ್ಪಡಿಸುವುದು ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಿದ ಬಗ್ಗೆ.
ಉಲ್ಲೇಖ: ಕಛೇರಿ ಜಾಹಿರಾತು ಸಂ.ಎಂಜಿಐ/ಎಪಿ/07/2018–19 ದಿನಾಂಕ 24.05.2018.

ವಿಷಯಕ್ಕೆ ಸಂಬಂಧಿಸಿದಂತೆ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ಆಯೋಜಿಸಲು ಕುರಿತು ಅರ್ಜಿಗಳನ್ನು ಆಹ್ವಾನಿಸಲಾಗಿ, ಒಟ್ಟು 45 ಅರ್ಹ ಸ್ವಸಹಾಯ ಸಂಘ ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದ್ದು, ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಒಂದು ದಿನದ ಕಾರ್ಯಾಗಾರವನ್ನು ದಿನಾಂಕ 27.06.2018ರಂದು ಬೆಳಗ್ಗೆ 10:30ಕ್ಕೆ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಶ್ರೀರಾಮಪುರ ಕ್ರಾಸ್, ಜಕ್ಕೂರು, ಬೆಂಗಳೂರು–560064 ಇಲ್ಲಿ ಆಯ್ಕೆಯಾದ ಸಂಸ್ಥೆಗಳ ಸಿಬ್ಬಂದಿಗಳಿಗೆ (ನವೀಕರಿಸಬಹುದಾದ ಇಂಧನ, ಪರಿಸರ ಸಂರಕ್ಷಣೆ, ಗಾಮೀಣಾಭಿವೃದ್ಧಿ ಮತ್ತು ಮಳೆ ನೀರುಕೊಯ್ಲು – ವಿಷಯಗಳಲ್ಲಿ ಆಸಕ್ತಿಹೊಂದಿರುವ, ಪರಿಣಿತಿ ಹೊಂದಿರುವ ಗರಿಷ್ಠ ಇಬ್ಬರು ಸಿಬ್ಬಂದಿಗಳು) ಹಮ್ಮಿಕೊಳ್ಳಲಾಗಿದೆ. ಆಯ್ಕೆಯಾದ ಸಂಸ್ಥೆಗಳ ಮುಖ್ಯಸ್ಥರು ಈ ಬಗ್ಗೆ ನಿಗವಹಿಸಿ ಸೂಕ್ತ ಸಿಬ್ಬಂದಿಗಳನ್ನು ಕಡ್ಡಾಯವಾಗಿ ನಿಯೋಜಿಸಿ ಕಾರ್ಯಾಗಾರದಲ್ಲಿ ನಿಗಧಿತ ದಿನಾಂಕದಂದು ಹಾಜರಾಗಲು ಸೂಚಿಸತಕ್ಕದ್ದು.

ಕಾರ್ಯಾಗಾರದ ನಂತರ ಪ್ರತಿ ಸಂಘಕ್ಕೆ ನೀಡಲಾಗುವ ನಿಗಧಿತ ಸಂಖ್ಯೆಗಳ ಹಾಗೂ ಸ್ಥಳಗಳ ಆಯ್ಕೆಯಂತೆ ಕಾರ್ಯಕ್ರಮಗಳನ್ನು ಸಂಸ್ಥೆಯು ಸೂಚಿಸುವ ಮಾದರಿಯಲ್ಲಿ ಆಯೋಜಿಸಿ ಕಾರ್ಯರೂಪಕ್ಕೆ ತರುವ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕುವ ಪ್ರಕ್ರೀಯೆಯಿರುತ್ತದೆ.

ಮುಂದುವರೆದು, ಸಂಸ್ಥೆಯ ಜಾಲತಾಣದಲ್ಲಿ ಇರುವ ವಿಷಯಗಳನ್ನು ಅಧ್ಯಾಯನ ಮಾಡಿ, ಸದರಿ ಸಂಘಗಳಿಂದ ಆಯ್ಕೆಯಾಗಿ ಬಂದ ಸಿಬ್ಬಂದಿಗಳು ತಾವು ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಆಯೋಜಿಸಲು ಸಿದ್ದರಿರುವಿರಿ ಎಂದು ಪವರ್‌ಪಾಯಿಂಟ್ ಪ್ರೆಸೆಂಟೇಶನ್ (5–10 ನಿಮಿಷ ಕಾಲಾವಧಿಯಲ್ಲಿ) ಮೂಲಕ ತೋರಿಸತಕ್ಕದ್ದು.

ವಂದನೆಗಳೊಂದಿಗೆ,

ಕಾರ್ಯನಿರ್ವಾಹಕ ನಿರ್ದೇಶಕರು